**ದಿನಾಂಕಃ 12.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಮಂಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲು ವಾದಿ ಪರ ಶ್ರೀ. ಆರ್.ಡಿ.ಆರ್. ವಕೀಲರಿಂದಃ**

ನೀವು ಯಾವ ದಿನಾಂಕದಿಂದ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತೀರುತ್ತೀರಿ ಎಂದರೆ ಸಾಕ್ಷಿ ನನ್ನ ಗಂಡ ತೀರಿಕೊಂಡ ನಂತರ ನಾನು 2005 ರಿಂದ ಕಾರ್ಯದರ್ಶಿ ಎಂದು ಕೆಲಸ ಮಾಡುತ್ತಿದ್ದೇನೆ, ನಿಖರವಾದ ದಿನಾಂಕ ಹೇಳಲು ಬರುವುದಿಲ್ಲ. ನನಗಿಂತ ಮೊದಲು ನನ್ನ ಗಂಡ ಕೆ.ವಿ.ಶಂಭುಲಿಂಗಪ್ಪರವರು ಕಾರ್ಯದರ್ಶಿಯಾಗಿದ್ದರು. ಕೆ.ವಿ.ಶಂಭುಲಿಂಗಪ್ಪರವರು ಕಾರ್ಯದರ್ಶಿ ಎಂದು ಕೆಲಸ ಮಾಡುತ್ತಿದ್ದಾಗ ಭಾರತ್ ಎಜುಕೇಶನ್ ಸೊಸೈಟಿಯಲ್ಲಿ ನಡೆದ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ಯಾವ ಯಾವ ಸರ್ವೆ ನಂಬರಿನ ಆಸ್ತಿಗಳನ್ನು ಯಾವ ಯಾವ ದಿನಾಂಕಗಳಲ್ಲಿ ಖರೀದಿ ಮಾಡಿರುತ್ತಾರೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿದೆ, ಹಳ್ಳಿಮೈಸೂರು ಗ್ರಾಮದ ಸ.ನಂ.43/2 ಅನ್ನು 1996 ರಲ್ಲಿ ಮತ್ತು ಸ.ನಂ. 43/1 ಅನ್ನು 1998 ನೇ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆ, ದಿನಾಂಕಗಳನ್ನು ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. 1996 ಮತ್ತು 1998 ರಲ್ಲಿ ನಡೆದ ಜಮೀನಿನ ಖರೀದಿಯ ವಿಚಾರಕ್ಕೆ ಸೇರಿದಾಗ ನಾನು ಹೋಗಿರಲಿಲ್ಲ, ನನ್ನ ಗಂಡ ಮಾತ್ರ ಹೋಗಿದ್ದರು. ಖರೀದಿ ವ್ಯವಹಾರಗಳ ಮಾತುಕತೆಯೂ ಹಳ್ಳಿಮೈಸೂರಿನಲ್ಲಿ ಆಗಿರುತ್ತದೆ, ಯಾವ ದಿನಾಂಕ ಎಂದು ಹೇಳಲು ಬರುವುದಿಲ್ಲ. ಖರೀದಿ ವ್ಯವಹಾರದ ಮಾತುಕತೆಗೆ ಕೆ.ವಿ.ಶಂಭುಲಿಂಗಪ್ಪರವರು, ಸ್ಥಳೀಯರಾದ ಪುಟ್ಟಪ್ಪ, ಬಸವರಾಜು ಇನ್ನು ಕೆಲವು

ಜನರಿದ್ದರು ಅವರ ಹೆಸರುಗಳನ್ನು ಹೇಳಲು ನನಗೆ ಬರುವುದಿಲ್ಲ. ಮಾತುಕತೆಯಾದ ಎಷ್ಟು ದಿನಕ್ಕೆ ಕ್ರಯಪತ್ರವಾಗಿವೆ ಎಂದರೆ ಸಾಕ್ಷಿ ಮೊದಲು 2011 ಎಂದು ನುಡಿದು ನಂತರ ಒಂದು ತಿಂಗಳಲ್ಲಿ ಕ್ರಯಪತ್ರವಾಗಿದೆ ಎಂದು ನುಡಿಯುತ್ತಾರೆ. ಕ್ರಯಪತ್ರದ ನೋಂದಣಿ ಸಮಯದಲ್ಲಿ ಯಾರು ಯಾರು ಸೇರಿದ್ದರು ಎಂದರೆ ಸಾಕ್ಷಿ ಪುಟ್ಟಪ್ಪ, ಸುಬಾಶ್ ಶೆಟ್ಟರು, ಅನಂತು ರವರು 1996ರ ಕ್ರಯಪತ್ರ ಮಾಡುವಾಗ ಸೇರಿದ್ದು, 1998 ಕ್ರಯಪತ್ರ ಮಾಡುವಾಗ ಅನಂತುರವರ ಮಗ ಸುರೇಶ, ಕೆ.ವಿ.ಶಂಭುಲಿಂಗಪ್ಪ ಮತ್ತು ಇತರರು ಸೇರಿದ್ದರು ಅವರ ಹೆಸರುಗಳನ್ನು ನನಗೆ ಹೇಳಲು ಬರುವುದಿಲ್ಲ. ಈ ಮೇಲೆ ಹೇಳಿದ ಹೆಸರುಗಳನ್ನು ಹೊರತುಪಡಿಸಿ ಮತ್ತೇ ಯಾರು ಇದ್ದರು ಎಂದರೆ ಸಾಕ್ಷಿ ನಾನು ಕ್ರಯಪತ್ರ ನೋಂದಣಿಯಾಗುವಾಗ ಹೋಗಿರಲಿಲ್ಲ, ಹೀಗಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ.

1996ರ ಕ್ರಯಪತ್ರಕ್ಕೆ ಪುಟ್ಟಪ್ಪ ಮತ್ತು ಇನ್ನೊಬ್ಬರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ, ಅವರ ಹೆಸರುಗಳನ್ನು ಹೇಳಲು ಬರುವುದಿಲ್ಲ. 1998ರ ಕ್ರಯಪತ್ರಕ್ಕೆ ಯಾರು ಸಾಕ್ಷಿ ಹಾಕಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. 1996ರ ಕ್ರಯಪತ್ರ ನೋಂದಣಿಯಾಗುವ ದಿನ 3 ಲಕ್ಷ ರೂ.ಗಳನ್ನು ಕೊಟ್ಟಿರುತ್ತಾರೆ. ಸದರಿ ಕ್ರಯಪತ್ರದ ಮಾತುಕತೆಯ ದಿನ ಎಷ್ಟು ಹಣ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. 1998ರ ಕ್ರಯಪತ್ರ ನೋಂದಣಿಯಾಗುವ ದಿನ 2 ಲಕ್ಷ ರೂ.ಗಳನ್ನು ಕೊಟ್ಟಿರುತ್ತಾರೆ ಎಂದು ಕೇಳಿಸಿಕೊಂಡಿದ್ದೇನೆ ಆದರೆ ನಿಖರವಾಗಿ ಗೊತ್ತಿಲ್ಲ. 1998ರ ಕ್ರಯಪತ್ರದ ಮಾತುಕತೆಯ ದಿನ ಎಷ್ಟು ಹಣ

ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಭಾರತ್ ಎಜುಕೇಶನ್ ಸೊಸೈಟಿಯನ್ನು ತಿಪಟೂರಿನಿಂದ ಹಳ್ಳಿಮೈಸೂರಿಗೆ ವರ್ಗಾವಣೆ ಕೋರಿ ಸಲ್ಲಿಸಿದ್ದ ಮನವಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ದಾಖಲಾತಿ ಯಾವುದು ಎಂದರೆ ಸಾಕ್ಷಿ ಅದನ್ನು ನನಗೆ ಹೇಳಲು ಬರುವುದಿಲ್ಲವೆಂದು ನುಡಿಯುತ್ತಾರೆ. ವರ್ಗಾವಣೆಯ ಸಂಬಂಧ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಕೆ.ವಿ.ಶಂಭುಲಿಂಗಪ್ಪರವರು ಸರ್ಕಾರಿ ವಿಜ್ಞಾನ ಕಾಲೇಜಿನಲ್ಲಿ ಎಸ್.ಡಿ.ಎ. ಎಂದು ಕೆಲಸ ಮಾಡುತ್ತಿದ್ದರು. 1985 ರಲ್ಲಿ ಕೆ.ವಿ.ಶಂಭುಲಿಂಗಪ್ಪರವರು ಕೆಲಸಕ್ಕೆ ಸೇರಿದ್ದರು. ಬಸವರಾಜಯ್ಯರವರು ಸೋಶಿಯಲ್ ವೆಲ್‌ಫೇರ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಕೆ.ವಿ.ಶಂಭುಲಿಂಗಪ್ಪರವರು ವಿಜ್ಞಾನ ಕಾಲೇಜಿನಲ್ಲಿ ಎಸ್ ಡಿ ಎ ಎಂದು ಕೆಲಸ ಮಾಡುತ್ತಿದ್ದ ಬಗ್ಗೆ ಹಾಗೂ ಬಸವರಾಜಯ್ಯರವರು ಸೋಶಿಯಲ್ ವೆಲ್ ಫೇರ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ನಾನು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಆಸ್ತಿ ಖರೀದಿ ಮಾಡುವ ಸಂಬಂಧ ಸರ್ಕಾರದಿಂದ ಅನುಮತಿ ಕೋರಿ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ. ಸರ್ಕಾರಿ ನೌಕರರಿಯಲ್ಲಿರುವವರು ಆಸ್ತಿ ಖರೀದಿ ಮಾಡಬೇಕಾದರೆ ಅವರ ಮೇಲಾಧಿಕಾರಿಗಳಿಂದ ಅನುಮತಿ ಪಡೆದು ಖರೀದಿ ಮಾಡಬೇಕಾಗುತ್ತದೆ ಎಂದರೆ ಹೌದು.

ಸರ್ಕಾರಿ ನೌಕರರು ಕೃಷಿ ಭೂಮಿಯನ್ನು ಖರೀದಿ ಮಾಡುವ ಸಲುವಾಗಿ ಅರ್ಜಿ ಸಲ್ಲಿಸಿದರೇ ಸರ್ಕಾರದವರು ಅನುಮತಿ ಕೊಡುತ್ತಾರೆ ಎಂದರೆ ಹೌದು. ಸರ್ಕಾರಿ ನೌಕರಿಯಲ್ಲಿ ಇದುದ್ದರಿಂದ ಕೆ.ವಿ.ಶಂಭುಲಿಂಗಪ್ಪರವರ ಹೆಸರಿನಲ್ಲಿ ಅಸ್ತಿ ಖರೀದಿ ಮಾಡಲು ಆಗದೇ ಇರುವುದರಿಂದ ರೇಣುಕಾರಾಧ್ಯ ರವರ ಹೆಸರಿಗೆ ಜಮೀನು ಖರೀದಿ ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ತಿ ಖರೀದಿಯ ವಿಷಯ ಯಾವ ದಿನಾಂಕದ ಕಾರ್ಯಕಾರಿಣಿ ಸಮಿತಿಯಲ್ಲಿ ತೀರ್ಮಾನವಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ಕಾರ್ಯಕಾರಿಣಿ ಸಮಿತಿಯ ತೀರ್ಮಾನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸಮಿತಿಯ ತೀರ್ಮಾನದ ವಿಷಯವನ್ನು ಕ್ರಯಪತ್ರದಲ್ಲಿ ತೋರಿಸಿಲ್ಲ.

ದಿಃ 12.10.1999 ರಂದು ರೇಣುಕಾರಾಧ್ಯರವರು ಜಿ.ಪಿ.ಎ. ಬರೆದುಕೊಟ್ಟಿರುತ್ತಾರೆ. ಹಳ್ಳಿಮೈಸೂರು ಗ್ರಾಮದ ಸ.ನಂ.43/2 ಮತ್ತು 43/1 ಕ್ಕೆ ಸಂಬಂಧಿಸಿದಂತೆ ರೇಣುಕಾರಾಧ್ಯರವರು ಜಿ.ಪಿ.ಎ. ಬರೆದುಕೊಟ್ಟಿರುತ್ತಾರೆ. ಪೂರ್ತಿ ಸ್ವತ್ತುಗಳನ್ನು ಜಿ ಪಿ ಎ ಮೂಲಕ ಕೊಟ್ಟಿದ್ದರು. ರೇಣುಕಾರಾಧ್ಯರವರು ಕೆ.ವಿ. ಶಂಭುಲಿಂಗಪ್ಪ ಹಾಗೂ ಮಂಜುನಾಥ್ ರವರಿಗೆ ಜಂಟಿಯಾಗಿ ಜಿ ಪಿ ಎ ಬರೆದುಕೊಟ್ಟಿದ್ದರು. ಜಿಪಿಎ ಯ ಮೂಲ ಪ್ರತಿ ಕೆ.ವಿ. ಶಂಭುಲಿಂಗಪ್ಪರವರ ಬಳಿ ಇದೆ. 1997-98ನೇ ಇಸವಿಯಲ್ಲಿ ಕಟ್ಟಡವನ್ನು ಕಟ್ಟಿರುತ್ತಾರೆ. ಕಟ್ಟಡ ಕಟ್ಟುವಾಗ ಗ್ರಾಮ ಪಂಚಾಯಿತಿಯಿಂದ ಲೈಸೆನ್ಸ್ ಮತ್ತು ಅಪ್ರೂಡ್ ಪ್ಲಾನ್ ಅನ್ನು ಪಡೆದುಕೊಂಡಿರುತ್ತಾರೆ. ಲೈಸೆನ್ಸ್ ಮತ್ತು ಅಪ್ರೂಡ್ ಪ್ಲಾನ್ ಅನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ಮೂಲ ಜೆ ಪಿ ಎ ನಮ್ಮ ಬಳಿ ಇದ್ದು, ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

ಹೊಳೆನರಸೀಪುರದ ಎಸ್ ಬಿ ಐ ಬ್ಯಾಂಕಿನಿಂದ 2007-2008ನೇ ಇಸವಿಯಲ್ಲಿ ಹಾಸ್ಟೆಲ್ ಕಟ್ಟುವ ಸಲುವಾಗಿ ಸಾಲ ಪಡೆದಿರುತ್ತಾರೆ. ಸಾಲ ಪಡೆಯುವಾಗ ಯಾವ ಆಸ್ತಿಯನ್ನು ಬ್ಯಾಂಕಿಗೆ ಅಡಮಾನ ಮಾಡಿದ್ದೀರಿ ಎಂದರೆ ಸಾಕ್ಷಿ ಯಾವುದೇ ಆಸ್ತಿಯನ್ನು ಅಡಮಾನ ಮಾಡಿರಲಿಲ್ಲ ಎಂದು ನುಡಿಯುತ್ತಾರೆ. ಬಸವರಾಜಯ್ಯರವರ ಕಡೆಯಿಂದ 3 ಲಕ್ಷ ರೂ.ಗಳನ್ನು, ನಮ್ಮ ಅತ್ತೆ ಗೌರಮ್ಮ ರವರ ಕಡೆಯಿಂದ 3 ಲಕ್ಷ, ನನ್ನ ತಮ್ಮ ಪಾಲ್ ಕೂಗೇರ್ ರವರ ಕಡೆಯಿಂದ 5 ಲಕ್ಷಗಳನ್ನು ಹಾಸ್ಟೆಲ್ ಕಟ್ಟುವ ಸಲುವಾಗಿ ಸಾಲ ಪಡೆದಿರುತ್ತಾರೆ. ಬಸವರಾಜಯ್ಯರವರ ಕಡೆಯಿಂದ ಯಾವ ದಿನಾಂಕದಂದು ಸಾಲ ಪಡೆದ್ದಿರು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ನನ್ನ ಅತ್ತೆ ಗೌರಮ್ಮರವರಿಂದ ಆಸ್ತಿ ಖರೀದಿ ಮಾಡುವಾಗ 1996ನೇ ಇಸವಿಯಲ್ಲಿ ಸಾಲ ಪಡೆದಿರುತ್ತಾರೆ. ಅದೇ ರೀತಿ ನನ್ನ ತಮ್ಮ ಪಾಲ್ ಕೂಗೇರ್ ರವರ ಕಡೆಯಿಂದ 1997-98 ನೇ ಇಸವಿಯಲ್ಲ್ ಸಾಲ ಪಡೆದಿದ್ದರು. ಈ ಮೇಲೆ ಹೇಳಿದ ಮೂರು ಜನರಿಂದ ಸಾಲ ಪಡೆದಿದ್ದರ ಬಗ್ಗೆ ನನ್ನ ಬಳಿ ದಾಖಲಾತಿಗಳು ಇಲ್ಲ. ಬ್ಯಾಂಕಿನಿಂದ ಸಾಲ ಪಡೆದ ಬಗ್ಗೆ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. 2004 ನೇ ಇಸವಿಯಲ್ಲಿ ರಾಜ್ಯ ಸಭಾ ಸದಸ್ಯರ ನಿಧಿಯಿಂದ ಹಾಸ್ಟೆಲ್ ಕಟ್ಟುವ ಸಲುವಾಗಿ ಸಾಲ ಪಡೆದಿದ್ದರು. ಈ ಸಂಬಂಧ ದಾಖಲಾತಿಗಳು ನನ್ನ ಬಳಿ ಇವೆ, ಅವುಗಳನ್ನು ನ್ಯಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ.

ಕೆ ವಿ ಶಂಭುಲಿಂಗಪ್ಪರವರು 1997-98ನೇ ಸಾಲಿನವರೆಗೂ ನೌಕರಿಯಲ್ಲಿದ್ದರು. ಈ ಸಂಬಂದ ನನ್ನ ಬಳಿ ದಾಖಲಾತಿಗಳು ಇವೆ, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನನ್ನ ಗಂಡ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ. ಯಾವ ಕಾರಣಕ್ಕಾಗಿ ರಾಜೀನಾಮೆ ಕೊಟ್ಟಿರುತ್ತಾರೆ ಎಂಬ ಬಗ್ಗೆ ದಾಖಲಾತಿಗಳಲ್ಲಿ ನಮೂದು ಇರುತ್ತವೆ ಎಂರದೆ ಸಾಕ್ಷಿ ಹಳ್ಳಿಮೈಸೂರಿನಲ್ಲಿ ಭಾರತ್ ಎಜುಕೇಶನ್ ಸೊಸೈಟಿ ಎನ್ನುವ ಶಾಲೆ ನಡೆಸಬೇಕು ಎನ್ನುವ ಉದ್ದೇಶದಿಂದ ನನ್ನ ಗಂಡ ರಾಜೀನಾಮೆ ಕೊಟ್ಟಿರುತ್ತಾರೆ. ಈ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಯಾವುದೇ ಕೃಷ್ಟಿ ಭೂಮಿಯಲ್ಲಿ ಕಟ್ಟಡ ಕಟ್ಟಬೇಕಾದರೆ ಅನ್ಯಸಂಕ್ರಮಣ ಮಾಡಿಸಬೇಕು ಎಂದರೆ ಹೌದು. ಸ.ನಂ.43/1 ರಲ್ಲಿ ರೇಣುಕಾರಾಧ್ಯರವರ ಹೆಸರಿಗೆ ಎಷ್ಟು ಆಸ್ತಿ ಇತ್ತು ಎಂರದೆ ಸಾಕ್ಷಿ ಅದು ಅವರ ವೈಯಕ್ತಿಕ ಆಸ್ತಿ ಅಲ್ಲ, ಸಂಸ್ಥೆಯ ಪರವಾಗಿ ಉಪಾಧ್ಯಕ್ಷರಾಗಿದ್ದ ಅವರ ಹೆಸರಿಗೆ 2 ಎಕರೆ 10 ಗುಂಟೆ ಆಸ್ತಿಯನ್ನು ಖರಿದಿ ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಅದೇ ರೀತಿ ಸ.ನಂ. 43/2 ರಲ್ಲಿಯೂ ಸಹಾ 1 ಎಕರೆ 10 ಗುಂಟೆ ಆಸ್ತಿಯನ್ನು ಸಂಸ್ಥೆಯ ಪರವಾಗಿ ರೇಣುಕಾರಾಧ್ಯರವರ ಹೆಸರಿಗೆ ಖರೀದಿ ಮಾಡಲಾಗಿತ್ತು. ಸಂಸ್ಥೆಯ ಪರವಾಗಿ ರೇಣುಕಾರಾಧ್ಯರವರ ಹೆಸರಿಗೆ ಖರೀದಿ ಮಾಡಲಾಗಿತ್ತು ಎಂದು ತೋರಿಸುವ ಸಲುವಾಗಿ ನನ್ನ ಬಳಿ ದಾಖಲೆ ಇವೆ, ಅಲ್ಲದೇ ಕಾರ್ಯಕಾರಿಣಿ ಸಮಿತಿಯ ತೀರ್ಮಾನದ ಅನ್ವಯ ಆಸ್ತಿಯನ್ನು ಉಪಾಧ್ಯಕ್ಷರಾದ ರೇಣುಕಾರಾಧ್ಯರವರ ಹೆಸರಿಗೆ ಖರಿದಿ ಮಾಡಲಾಗಿರುತ್ತದೆ. ಈ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ಸ,ನಂ.43/1ರ ಚೆಕ್ಕುಬಂಧಿ ಎಂದರೆ ಪೂರ್ವಕ್ಕೆ ರೇಣುಕಾರಾಧ್ಯರವರ ಹೆಸರಿನಲ್ಲಿರುವ ಆಸ್ತಿ, ಪಶ್ಚಿಮಕ್ಕೆಃ ಸುಭಾಶ್ ರವರ ಆಸ್ತಿ, ದಕ್ಷಿಣಕ್ಕೆಃ ತಮ್ಮಯ್ಯಶೆಟ್ಟರವರ ಆಸ್ತಿ ಮತ್ತು ಉತ್ತರಕ್ಕೆಃ ರೇಣುಕಾರಾಧ್ಯರವರ ಉಳಿದ ಆಸ್ತಿ ಬರುತ್ತದೆ. ಸ.ನಂ. 43/2ರ ಆಸ್ತಿಯ ಚೆಕ್ಕುಬಂದಿ ಎಂದರೆ ಪೂರ್ವಕ್ಃ ಸರ್ಕಾರಿ ಜಮೀನು, ಪಶ್ಚಿಮಕ್ಕೆಃ ರೇಣುಕಾರಾಧ್ಯರವರ ಸ್ವಲ್ಪ ಆಸ್ತಿ ಹಾಗೂ ಪಾಲ್ ಕೂಗೇರವರ 43/15ರ ಆಸ್ತಿ, ಉತ್ತರಕ್ಕೆಃ ತಮ್ಮಣ್ಣಶೆಟಟಿರವರ ಆಸ್ತಿ ಮತ್ತು ದಕ್ಷಿಣಕ್ಕೆ ಯಾರ ಆಸ್ತಿ ಬರುತ್ತದೆ ಎಂದು ನೆನಪಿಲ್ಲ.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಇದೆ.

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.